Indian Journal of History and Archaeology

ISSN (E):2582-225X
VOL-2, ISSUE -6, MAR-APRIL, 2021, 67-71

# ಬೆಳಚಲವಾಡಿ ಗ್ರಾಮದ ಸ್ಮಾರಕ ಶಿಲ್ಪಗಳು–ಒಂದು ಅವಲೋಕನ

**ಮಲ್ಲೇಶ.ಡಿ.**

**ಮಲ್ಲೇಶ.ಡಿ.**
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು.

ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯ ವ್ಯಾಪ್ತಿಯಲ್ಲಿ ಕಂಡುಬರುವ ಬೆಳಚಲವಾಡಿ ಗ್ರಾಮವು ಬೇಗೂರಿನಿಂದ ವಾಯುವ್ಯ ದಿಕ್ಕಿಗೆ ಹೊಂದಿಕೊಂಡಂತೆ ಕಂಡುಬರುತ್ತದೆ. ಈ ಗ್ರಾಮವು ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವ ಪಡೆದುಕೊಂಡಿದ್ದು, ಈ ಗ್ರಾಮದಲ್ಲಿ ನಾನು ಸಂಶೋಧನಾ ದೃಷ್ಠಿಯಿಂದ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ನನಗೆ ಏಳು ಸ್ಮಾರಕಶಿಲ್ಪಗಳು ಕಂಡುಬಂದಿದ್ದು, ಗೋಚರಗೊಂಡ ಈ ಸ್ಮಾರಕಗಳು ಇತಿಹಾಸ ಅಧ್ಯಯನದ ದೃಷ್ಟಿಯಿಂದ ಹೆಚ್ಚು ಮಹತ್ವ ಪಡೆದುಕೊಂಡಿವೆ.

ವೀರಗಲ್ಲುಗಳು ಎಂದರೆ ನಾಡಿಗಾಗಿ ಮಡಿದ ವೀರನನ್ನು ವ್ಯಕ್ತಪಡಿಸುವ ಕಲ್ಲುಗಳಿಗೆ ವೀರಗಲ್ಲು ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ರಾಜರು ಕಾಲದಿಂದ ಕಾಲಕ್ಕೆ ಆಡಳಿತ ನಡೆಸಿರುವುದಕ್ಕೆ ಇತಿಹಾಸ ಎಂಬ ಭಾವನೆ ಪ್ರಚಲಿತವಾಗಿದೆ. ಜನಸಾಮಾನ್ಯರು ಬಾಳ ಬದುಕಿದ ರೀತಿ, ಅವರು ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರವರ ಜೀವನ ಸಮಸ್ಯೆಗಳು ಈ ರೀತಿಯ ಇತಿಹಾಸವನ್ನು ಒದಗಿಸುವುದಲ್ಲಿ ವೀರಗಲ್ಲುಗಳು ಅತ್ಯಂತ ಪ್ರಮುಖವಾಗಿರುತ್ತವೆ.

ವೀರಗಲ್ಲುಗಳು ಸಾಮಾನ್ಯವಾಗಿ ಶಿಲ್ಪದ ಮೂರು ಹಂತಗಳನ್ನು ಒಳಗೊಂಡಿರುತ್ತದೆ. ಮೊದಲನೆ ಹಂತದಲ್ಲಿ ವೀರರು ಶತ್ರುಗಳೊಡನೆ ಹೋರಾಟ ಮಾಡುತ್ತಿರುವ ದೃಶ್ಯದ ಶಿಲ್ಪ ಎರಡನೆ ಹಂತದಲ್ಲಿ ಆತನನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿರುವ ಅಪ್ಸರೆಯನ್ನು ಚಿತ್ರಿಸಿರುವುದು ಮೂರನೆ ಹಂತದಲ್ಲಿ ಆತನು ಶಿವನ ಸಾನಿಧ್ಯದಲ್ಲಿರುವುದನ್ನು ಕಡೆಯಲಾಗಿದೆ ಇದಕ್ಕೆ ಸಾಕ್ಷಿಯಾಗಿ ವೀರಗಲ್ಲಿನ ಮೇಲ್ಭಾಗದಲ್ಲಿ ಒಂದು ಕಡೆ ಸೂರ್ಯ, ಮತ್ತೊಂದೆಡೆ ಚಂದ್ರನನ್ನು ಕೆತ್ತಿರುತ್ತಾರೆ. ಇಂತಹ ವೀರಗಲ್ಲುಗಳು ಕರ್ನಾಟಕದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಂಡು

ಬರುತ್ತವೆ. ಕೆಲವು ವೀರಗಲ್ಲುಗಳು ಶಾಸನ ಸಹಿತವಾಗಿ ಮತ್ತು ಶಾಸನ ರಹಿತವಾಗಿ ಕಂಡು ಬರುವುದುಂಟು ಆದರೆ ಶಾಸನಗಳು ಇರಲಿ ಅಥವಾ ಇಲ್ಲದಿರಲಿ ಸಾಮಾನ್ಯವಾಗಿ ವೀರಗಲ್ಲಿನ ಉದ್ದೇಶ ಒಂದೇ ಆಗಿರುತ್ತದೆ.

**1.ವೀರಗಲ್ಲು** :–ಈ ವೀರಗಲ್ಲು ಸುಮಾರು 3 ಅಡಿ ಉದ್ದ 2 ಅಡಿ ಅಗಲ ಮತ್ತು 6 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ವೀರರು ಪರಸ್ಪರ ಯುದ್ಧದಲ್ಲಿ ಹೋರಾಡಿ ಮಡಿದ ದೃಶ್ಯ ಕಂಡುಬರುತ್ತದೆ. 2ನೇ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು ಸ್ವರ್ಗಲೋಕಕ್ಕೆ ಯುದ್ಧದಲ್ಲಿ ಮಡಿದ ವೀರರನ್ನು ಕರದೊಯ್ಯುತ್ತಿರುವ ದೃಶ್ಯ ಕಂಡುಬರುತ್ತದೆ. ಹಾಗೂ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಇದರ ಎಡಭಾಗದಲ್ಲಿ ನಂದಿ ಶಿಲ್ಪ ಜೊತೆಗೆ ಹಿಂಬದಿಯಲ್ಲಿ ಭಕ್ತ ನಿಂತಿರುವುದು ಹಾಗೂ ಬಲಭಾಗದಲ್ಲಿ ವೀರಯೋಧ ಕೈ ಮುಗಿದು ಕುಳಿತಿರುವ ದೃಶ್ಯವು ಕಂಡುಬರುತ್ತದೆ. ಇದರ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಉಬ್ಬು ಶಿಲ್ಪವನ್ನು ಕಂಡರಿಸಲಾಗಿದೆ.

**2.ವೀರಗಲ್ಲು**:–ಈ ವೀರಗಲ್ಲು ಸುಮಾರು 3 ಅಡಿ ಉದ್ದ 2 ಅಡಿ ಅಗಲ ಮತ್ತು 6 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲ ಪಟ್ಟಿಕೆಯಲ್ಲಿ ಇಬ್ಬರು ಯೋಧರು ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ಪರಸ್ಪರ ವೀರಾವೇಶದಿಂದ ಹೋರಾಡುತ್ತಿರುವ ದೃಶ್ಯವು ಕಂಡುಬರುತ್ತದೆ. ಎರಡನೇ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು ಸ್ವರ್ಗಲೋಕಕ್ಕೆ ಯುದ್ಧದಲ್ಲಿ ಮಡಿದ ವೀರರನ್ನು ಕರದೊಯ್ಯುತ್ತಿರುವುದು ಜೊತೆಗೆ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಇದರ ಎಡಭಾಗದಲ್ಲಿ ನಂದಿ ಶಿಲ್ಪಜೊತೆಗೆ ಹಿಂಬದಿಯಲ್ಲಿ ಭಕ್ತ ನಿಂತಿರುವುದು ಹಾಗೂ ಬಲಭಾಗದಲ್ಲಿ ವೀರಯೋಧ ಕೈ ಮುಗಿದು ಕುಳಿತಿರುವ ದೃಶ್ಯವು ಕಂಡುಬರುತ್ತದೆ. ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪಕೆತ್ತನೆಯನ್ನು ಕಂಡರಿಸಲಾಗಿದೆ.

**3.ವೀರಗಲ್ಲು**:–ಈ ವೀರಗಲ್ಲು ಸುಮಾರು 3 ಅಡಿ ಉದ್ದ 3 ಅಡಿ ಅಗಲ ಮತ್ತು 5 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಯಿಂದ ಕೂಡಿದ್ದು ಮೊದಲ ಪಟ್ಟಿಕೆಯಲ್ಲಿ ಇಬ್ಬರು ಯೋಧರು ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ಪರಸ್ಪರ ಯದ್ಧ ಮಾಡುತ್ತಿರುವ ದೃಶ್ಯ ಎರಡನೇ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಿಣಿ ದೇವಕನ್ಯೆಯರು ಯುದ್ಧದಲ್ಲಿ ಸತ್ತ ಮೂರುಜನ ವೀರಯೋಧರನ್ನು ದೇವ ಲೋಕಕ್ಕೆ ಕರದೊಯ್ಯುತ್ತಿರುವ ದೃಶ್ಯ ಹಾಗೂ ಮೂರನೇ ಪಟ್ಟಿಕೆಯಲ್ಲಿ ಕೊಳಲನ್ನು ಊದುತ್ತಿರುವ ವೇಣುಗೋಪಾಲನ ಚಿತ್ರಎಡ ಭಾಗದಲ್ಲಿ ಇಬ್ಬರು ಸ್ತ್ರೀಯರು, ಬಲ ಭಾಗದಲ್ಲಿ ಯತಿಯು ವೇಣುಗೋಪಾಲನಿಗೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು ಇವರ ಪಕ್ಕದಲ್ಲಿ ಭಕ್ತನು ಕೈ

ಮುಗಿದು ಕುಳಿತಿರುವ ದೃಶ್ಯವು ಕಂಡುಬರುತ್ತದೆ. ಜೊತೆಗೆ ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರಉಬ್ಬು ಶಿಲ್ಪಕೆತ್ತನೆಯನ್ನು ಕಂಡರಿಸಲಾಗಿದೆ.

**4.ವೀರಗಲ್ಲು** :–ಈ ವೀರಗಲ್ಲು ಸುಮಾರು 2 ಅಡಿ ಉದ್ದ 2.5 ಅಡಿ ಅಗಲ 2 ಅಡಿ ಎತ್ತರ ಹೊಂದಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ಯೋಧರು ಪರಸ್ಪರ ಯುದ್ಧದಲ್ಲಿ ತೊಡಗಿ ಮರಣ ಹೊಂದಿದ ದೃಶ್ಯ ಎರಡನೇ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಣಿ ದೇವಕನ್ಯೆಯರು ದೇವ ಲೋಕಕ್ಕೆ ಕರದೊಯ್ಯುತ್ತಿರುವ ದೃಶ್ಯವಿದೆ.ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪಕೆತ್ತನೆಯನ್ನು ಕಂಡರಿಸಲಾಗಿದೆ.

**5.ಕುದುರೆ ಮೇಲೆ ಕುಳಿತ ರಾಜ**:– ಈ ಶಿಲ್ಪವು ಸುಮಾರು 2 ಅಡಿ ಎತ್ತರ 2.5 ಅಡಿ ಅಗಲವಾಗಿದ್ದು, ಒಂದು ಪಟ್ಟಿಕೆಯಿಂದ ಮಾತ್ರ ಕೂಡಿದೆ. ಇದರಲ್ಲಿ ರಾಜ ಕುದುರೆ ಮೇಲೆ ಕುಳಿತಿದ್ದು ಎಡಗೈಯಲ್ಲಿ ಲಗಾಮು ಹಿಡಿದು ಬಲಗೈಯಲ್ಲಿ ಭರ್ಜಿಗಳನ್ನು ಹಿಡಿದಿದ್ದು ವೀರವೇಷದಿಂದ ಹೋರಾಟಕ್ಕೆ ನಿಂತಿದ್ದು ಇದರಲ್ಲಿ ಹಿಂಭಾಗದಲ್ಲಿ ಸ್ತ್ರೀಯು ಕೈ ಮುಗಿದು ನಿಂತಿರುವ ದೃಶ್ಯ ಕಂಡು ಬಂದಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪ ಕೆತ್ತನೆಯನ್ನು ಕಾಣಬಹುದಾಗಿದೆ.

**6.ವೀರಗಲ್ಲು** :–ಈ ವೀರಗಲ್ಲು ಸುಮಾರು 3 ಅಡಿ ಉದ್ದ 2 ಅಡಿ ಅಗಲ ಮತ್ತು 6 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ. ಇದು ಮೂರು ಪಟ್ಟಿಕೆಯಿಂದ ಕೂಡಿದೆ. ಮೊದಲನೇ ಪಟ್ಟಿಕೆಯಲ್ಲಿ ಇಬ್ಬರು ವೀರರು ಪರಸ್ಪರ ಯುದ್ಧದಲ್ಲಿ ಹೋರಾಡಿ ಮಡಿದ ದೃಶ್ಯ ಕಂಡುಬರುತ್ತದೆ. 2ನೇ ಪಟ್ಟಿಕೆಯಲ್ಲಿ ಇಬ್ಬರು ದೇವಕನ್ಯೆಯರು ಸ್ವರ್ಗಾಲೋಕಕ್ಕೆ ಯುದ್ಧದಲ್ಲಿ ಮಡಿದ ವೀರರನ್ನು ಕರದೊಯ್ಯುತ್ತಿರುವ ದೃಶ್ಯ ಕಂಡುಬರುತ್ತದೆ. ಹಾಗೂ ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಇದರ ಎಡಭಾಗದಲ್ಲಿ ನಂದಿ ಶಿಲ್ಪ ಜೊತೆಗೆ ಹಿಂಬದಿಯಲ್ಲಿ ಭಕ್ತ ನಿಂತಿರುವುದು ಹಾಗೂ ಬಲಭಾಗದಲ್ಲಿ ವೀರಯೋಧ ಕೈ ಮುಗಿದು ಕುಳಿತಿರುವ ದೃಶ್ಯವು ಕಂಡುಬರುತ್ತದೆ. ಇದರ ಮೇಲ್ಭಾಗದಲ್ಲಿ ಸೂರ್ಯಚಂದ್ರರ ಉಬ್ಬು ಶಿಲ್ಪವನ್ನು ಕಂಡರಿಸಲಾಗಿದೆ.

**7.ವೀರಗಲ್ಲು** :–ಈ ವೀರಗಲ್ಲು ಸುಮಾರು 3 ಅಡಿ ಉದ್ದ 4 ಅಡಿ ಅಗಲ ಮತ್ತು 6 ಇಂಚು ದಪ್ಪವಾಗಿದ್ದು ಗ್ರಾನೈಟ್ ಕಲ್ಲಿನದ್ದಾಗಿದೆ.ಇದು ಮೂರು ಪಟ್ಟಿಕೆಯಿಂದ ಕೂಡಿದೆ ಮೊದಲನೇ ಪಟ್ಟಿಕೆಯಲ್ಲಿ 8 ಜನ ವ್ಯಕ್ತಿಗಳು ಕತ್ತಿ ಮತ್ತು ಗುರಾಣಿಗಳನ್ನು ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಿಂದ ವೀರಾವೇಶದಿಂದ ಯುದ್ಧದಲ್ಲಿ ಹೋರಾಡುತ್ತಿರುವ ದೃಶ್ಯ ಎರಡನೇ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಿಣಿ ಕನ್ಯೆಯರು ಯುದ್ಧದಲ್ಲಿ ಮಡಿದ ಎಂಟು ಜನ ವ್ಯಕ್ತಿಗಳನ್ನು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ ಹಾಗೂ ಮೂರನೇ ಪಟ್ಟಿಕೆಯಲ್ಲಿ ಕೊಳಲನ್ನು ಊದುತ್ತಿರುವ ವೇಣುಗೋಪಾಲ ಹಾಗು ಎಡ ಮತ್ತು ಬಲ ಭಾಗದಲ್ಲಿ ಇಬ್ಬರು ಯತಿಯರು

ಪೂಜಾ ಕೈಂಕರ್ಯವನ್ನು ನೆರವೇರಿಸುತ್ತಿರುವುದು ಹಾಗೂ ಎಡ ಮತ್ತು ಬಲ ಭಾಗದಲ್ಲಿ ಆರು ಜನ ಯುದ್ಧದಲ್ಲಿ ಮಡಿದ ವೀರರು ಕೈಮುಗಿದು ಕುಳಿತಿರುವ ದೃಶ್ಯ ಮತ್ತು ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರಉಬ್ಬು ಶಿಲ್ಪಕೆತ್ತನೆಯನ್ನು ಕಂಡರಿಸಲಾಗಿದೆ. ಜೊತೆಗೆಎಡ ಮತ್ತು ಬಲಭಾಗದಲ್ಲಿ ಗೋವುಗಳ ಉಬ್ಬು ಶಿಲ್ಪಗಳನ್ನು ಸಹ ಕಂಡರಿಸಲಾಗಿದೆ. ಆದ್ದರಿಂದ ಇದನ್ನು ಗೋಗ್ರಹಣದ ವೀರಗಲ್ಲು ಎಂದು ಪರಿಗಣಿಸಲಾಗಿದೆ.

ಒಟ್ಟಾರೆ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಈ ಬೆಳಚಲವಾಡಿ ಗ್ರಾಮದಲ್ಲಿ ದೊರೆತ ಎಲ್ಲಾ ವೀರಗಲ್ಲುಗಳಲ್ಲಿರುವ ದೃಶ್ಯಾವಳಿಗೆ ಧಾರ್ಮಿಕ ಹಿನ್ನೆಲೆಯ ಹಾದಿಯಲ್ಲಿ ಶೈವ ಸಂಸ್ಕೃತಿಯನ್ನು ಸಾರುವ ಪರಿಕರಗಳಾಗಿದ್ದು ಪ್ರತಿಯೊಂದರಲ್ಲೂ ಶಿವಲಿಂಗ, ಸೂರ್ಯಚಂದ್ರ ಮತ್ತು ನಂದಿಯ ಶಿಲ್ಪವಿದ್ದು ಇವುಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಇಲ್ಲಿ ಶೈವ ಧರ್ಮದ ಆಚರಣೆ ಹೆಚ್ಚಾಗಿದ್ದು ಇಲ್ಲಿ ಶೈವ ಪರಂಪರೆಯ ಸಂಸ್ಕೃತಿಯ್ನನು ಸಾರುತ್ತವೆ ಎಂದು ಹೇಳಬಹುದಾಗಿದೆ.

**ಛಾಯಾಚಿತ್ರಗಳು**



**1.ವೀರಗಲ್ಲು**



**2.ವೀರಗಲ್ಲು**



**3.ವೀರಗಲ್ಲು**



**4.ವೀರಗಲ್ಲು**



**5.ಕುದುರೆ ಮೇಲೆ ಕುಳಿತ ರಾಜ**



**6.ವೀರಗಲ್ಲು**



**7.ವೀರಗಲ್ಲು**

## ಗ್ರಂಥಋಣ:

1. ಸೂರ್ಯನಾಥ ಕಾಮತ್ ಯು (ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1, ಕರ್ನಾಟಕ ಸರ್ಕಾರ, ಬೆಂಗಳೂರು–1984
2. ಶೇಷಶಾಸ್ತ್ರಿ, ಆರ್– ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2010.
3. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–2010
4. ಪರಶಿವಮೂರ್ತಿ. ಡಿ.ವಿ– ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1999.
5. ಚಿದಾನಂದಮೂರ್ತಿ,ಎಂ– ಕನ್ನಡ ಶಾಸನಗಳ ಸಂಸ್ಕೃತಿಕ ಅಧ್ಯಯನ, ಬೆಂಗಳೂರು–2002
6. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2005
7. ಪೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ–1 ರಿಂದ 7.